**ದಿನಾಂಕ: 26-11-2015 ರಂದು ಕರ್ನಾಟಕ ಮಾಹಿತಿ ಆಯೋಗದ ರಾಜ್ಯ ಮುಖ್ಯ ಮಾಹಿತಿ ಆಯುಕ್ತರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡೆವಳಗಳು**

**ಸಭೆಯಲ್ಲಿ ಹಾಜರಿದ್ದವರು**

1. ಡಾ॥ ಶೇಖರ್ .ಡಿ ಸಜ್ಜನರ್. ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ).
2. ಶ್ರೀ. ಎಲ್. ಕೃಷ್ಣಮೂರ್ತಿ. ರಾಜ್ಯ ಮಾಹಿತಿ ಆಯುಕ್ತರು.
3. ಶ್ರೀ. ವೃಷಭೇಂದ್ರ ಮೂರ್ತಿ. ಕಾರ್ಯದರ್ಶಿ.
4. ಶ್ರೀಮತಿ. ಶ್ರೀಲತಾ ಕೋಟೇಮಠ್. ಅಧೀನ ಕಾರ್ಯದರ್ಶಿ.

ಸಭೆಯಲ್ಲಿ ಈ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.

1. **ಶ್ರೀ. ಜಿ.ಬಿ. ಶರತ್‌ಗೌಡ, ವಕೀಲರು, ಇವರ ಕಾರ್ಯವರಧಿಯನ್ನು ಕರ್ನಾಟಕ ಮಾಹಿತಿ ಆಯೋಗದಲ್ಲಿ ಮುಂದುವರೆಸುವ ಬಗ್ಗೆ.**

ಶ್ರೀ. ಜಿ.ಬಿ. ಶರತ್ ಗೌಡ. ವಕೀಲರು. ಇವರ ಸೇವಾ ಅವಧಿಯು ದಿ: 06-12-2015ಕ್ಕೆ ಮುಕ್ತಾಯಗೊಳ್ಳಲಿದ್ದು. ಅವರ ಸೇವಾ ಅವಧಿಯನ್ನು ಮುಂದುವರೆಸಲು ಶ್ರೀಯುತರು ಮನವಿಯನ್ನು ಸಲ್ಲಿಸಿರುವ ಬಗ್ಗೆ ಕಾರ್ಯದರ್ಶಿಗಳು ಸಭೆಗೆ ತಿಳಿಸಿದರು. ಈ ಸಂಬಂಧ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಆಯೋಗವನ್ನು ಪ್ರತಿನಿಧಿಸುವ ಪ್ರಕರಣಗಳು ಹೆಚ್ಚಾಗುತ್ತಿದ್ದು ಇಬ್ಬರು ರೀಟೈನರ್‌ಗಳ ಅವಶ್ಯಕತೆ ಇರುವುದರಿಂದ ಶ್ರೀ. ಜಿ.ಬಿ. ಶರತ್ ಗೌಡ. ವಕೀಲರು. ಇವರ ಕಾರ್ಯಾವಧಿಯನ್ನು ಇನ್ನು ಒಂದು ವರ್ಷದವರೆಗೆ ಮುಂದುವರೆಸಲು ಸಭೆ ಒಮ್ಮತದಿಂದ ತೀರ್ಮಾನಿಸಿತು. ಈ ಸಂಬಂಧ ಕಾರ್ಯದರ್ಶಿಗಳು ಮುಂದಿನ ಕ್ರಮ ತೆಗೆದುಕೊಳ್ಳುವುದು.

ಕ್ರಮ: ಕಾರ್ಯದರ್ಶಿ

2. **ಕಾನೂನು ಅಧಿಕಾರಿಗಳ ನೇಮಕಾತಿ ಕುರಿತು.**

ಕಾನೂನು ಅಧಿಕಾರಿಗಳ ನೇಮಕಾತಿ ಕುರಿತು ಈಗಾಗಲೇ ರಾಜ್ಯ ಉಚ್ಚ ನ್ಯಾಯಾಲಯದ ರಿಜಿಸ್ಟ್ರಾರ್‌ರವರಿಂದ ನಿವೃತ್ತ ಜಿಲ್ಲಾ ಸೆಷನ್ಸ್ ಜೆಡ್ಜ್‌ಗಳ ಪಟ್ಟಿಯನ್ನು ತರಿಸಿದ್ದು ಕಳೆದ ಸಭೆಯ ನಡಾವಳಿಯಂತೆ ಸುಮಾರು 50 ಜನಕ್ಕೆ ಅವರ ವೈಯಕ್ತಿಕ ಮಾಹಿತಿಯನ್ನು ದಿ: 28-10-2015ರ ಒಳಗಾಗಿ ಸಲ್ಲಿಸುವಂತೆ ಕೋರಲಾಗಿತ್ತು. ಅದಕುತ್ತರವಾಗಿ ಕೇವಲ 15 ಜನ ಮಾತ್ರ ತಮ್ಮ ಸ್ವಯಿಚ್ಚೆಯಿಂದ ವೈಯಕ್ತಿಕ ಮಾಹಿತಿಗಳನ್ನು ಸಲ್ಲಿಸಿರುತ್ತಾರೆ ಎಂಬ ಅಂಶವನ್ನು ಕಾರ್ಯದರ್ಶಿಗಳು ಸಭೆಗೆ ವಿವರಿಸಿದರು. ಮಾನ್ಯ ಮುಖ್ಯ ಮಾಹಿತಿ ಆಯುಕ್ತರು(ಪ್ರ) ವೈಯಕ್ತಿಕ ಮಾಹಿತಿ ಸಲ್ಲಿಸಿದ ನ್ಯಾಯಾಧೀಶರೊಂದಿಗೆ ಸಮಾಲೋಚನೆ ನಡೆಸಲು ಒಂದು ದಿನ ಗೊತ್ತುಪಡಿಸಲು ಸೂಚಿಸಿದರು. ಅದರಂತೆ ದಿನಾಂಕ: 09-12-2015 ರಂದು ಸಮಾಲೋಚನೆಗಾಗಿ ದಿನ ಗೊತ್ತುಪಡಿಸಿ ಬೆಳಗ್ಗೆ 11.00 ಗಂಟೆಯಿಂದ 1.30 ಗಂಟೆಯವರೆಗೆ 8 ಜನಕ್ಕೆ ಹಾಗೂ ಮಧ್ಯಾಹ್ನ 3.00 ಗಂಟೆಯಿಂದ 5.30 ಗಂಟೆಯವರೆಗೆ 7 ಜನಕ್ಕೆ ಸಮಾಲೋಚನೆಗೆ ಸಮಯ ನಿಗಧಿಪಡಿಸಬೇಕೆಂದು ಸಭೆ ತೀರ್ಮಾನಿಸಿ ಈ ವಿಷಯಗಳನ್ನು ಎಲ್ಲಾ ಅರ್ಜಿದಾರರಿಗೆ ತಿಳಿಸಲು ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

3. **ಕಾನೂನು ಸಹಾಯಕರ ನೇಮಕಾತಿ ಕುರಿತು.**

ಕಾನೂನು ಸಹಾಯಕರ ನೇಮಕಾತಿ ಕುರಿತು ಕಾನೂನು ಅಧಿಕಾರಿಗಳ ನೇಮಕಾತಿಯ ನಂತರ ಕ್ರಮಕೈಗೊಳ್ಳಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

4. ಗಣಕಯಂತ್ರ & ಜೆರಾಕ್ಸ್ ಮಿಷಿನ್‌ಗಳನ್ನು ಖರೀದಿಸುವ ಬಗ್ಗೆ.

ಗಣಕಯಂತ್ರ & ಜೆರಾಕ್ಸ್ ಮಿಷಿನ್‌ಗಳನ್ನು ಖರೀದಿಸುವ ಬಗ್ಗೆ ಡಿ.ಜಿ.ಎಸ್ & ಡಿ ಧರಗಳ ಪಟ್ಟಿ ಲಭ್ಯವಾಗಿದ್ದು. ಅದರಂತೆ ಹೊಸ ಗಣಕ ಯಂತ್ರ ಹಾಗೂ ಜೆರಾಕ್ಸ್ ಯಂತ್ರಗಳನ್ನು ತುರ್ತಾಗಿ ಖರೀದಿಸಲು ಸಭೆ ಒಪ್ಪಿ ಕಾರ್ಯದರ್ಶಿಗಳಿಗೆ ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳಲು ಅನುಮತಿಸಿತು.

ಕ್ರಮ: ಕಾರ್ಯದರ್ಶಿ

5. 2015-16ನೇ ಸಾಲಿನ ಅಯವ್ಯಯವನ್ನು ಸರ್ಕಾರಕ್ಕೆ ಕಳುಹಿಸುವ ಮುನ್ನ ಚರ್ಚಿಸುವ ಬಗ್ಗೆ.

2015-16ನೇ ಸಾಲಿನ ಅಯವ್ಯಯವನ್ನು ಕಾರ್ಯದರ್ಶಿಗಳು ಸಭೆಯಲ್ಲಿ ಚರ್ಚೆಗಾಗಿ ಇರಿಸಿದರು ಈ ಬಗ್ಗೆ ಸಭೆ ಕೂಲಂಕುಷವಾಗಿ ಚರ್ಚಿಸಿ ತಿದ್ದುಪಡಿಗಳನ್ನು ಮಾಡಿ ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಲು ಸಭೆ ಕಾರ್ಯದರ್ಶಿಯವರಿಗೆ ಅನುಮತಿಸಿತು.

ಕ್ರಮ: ಕಾರ್ಯದರ್ಶಿ

6. ಎ.ಜಿ.ಯವರಿಂದ ಬಂದಿರುವ ಆಕ್ಷೇಪಣೆಗಳಿಗೆ ಉತ್ತರ ನೀಡುವ ಬಗ್ಗೆ.

2008-09ನೇ ಸಾಲಿನಿಂದ 2014-15ನೇ ಸಾಲಿನವರೆಗಿನ ಆಯೋಗದ ಲೆಕ್ಕ ಪತ್ರವನ್ನು ಪರಿಶೋಧನೆ ನಡೆಸಿ ಆಕ್ಷೇಪಣೆಗಳನ್ನು ಡಿ.ಪಿ.ಎ.ಆರ್ ಜನಸ್ಪಂದನ ಇವರು ಆಕ್ಷೇಪಣೆಗಳೊಂದಿಗೆ ಮತ್ತೊಮ್ಮೆ ಸಲ್ಲಿಸಲು ಕೋರಿದ್ದು. ಎ.ಜಿ. ಕಛೇರಿಯವರು ಸಲ್ಲಿಸಿದ್ದ ವರದಿಯನ್ನು ಕಾರ್ಯದರ್ಶಿಗಳು ಸಭೆಗೆ ಮಂಡಿಸಿದರು. ಈ ಬಗ್ಗೆ ಸಭೆ ಚರ್ಚಿಸಿ ಈ ಹಿಂದೆ ನೀಡಿದಂತಹ ಉತ್ತರಗಳನ್ನೆ ಮತ್ತೊಮ್ಮೆ ಸರ್ಕಾರಕ್ಕೆ ಕಳುಹಿಸಲು ಸಭೆ ಕಾರ್ಯದರ್ಶಿಯವರಿಗೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

7. ಕೋರ್ಟ್‌ಹಾಲ್ -04ರ ಮುಖಾಂತರ ಬಿಬಿಎಂಪಿ ಪ್ರಕರಣಗಳ ವಿಲೇವಾರಿಗಾಗಿ ಆರ್‌ಟಿಐ ಲೋಕ್ ಅದಾಲತ್ ನಡೆಸುವ ಬಗ್ಗೆ

ಶ್ರೀ. ಎಲ್. ಕೃಷ್ಣಮೂರ್ತಿ. ರಾಜ್ಯ ಮಾಹಿತಿ ಆಯುಕ್ತರು ಇವರು ಬಿಬಿಎಂಪಿ ಪ್ರಕರಣಗಳನ್ನು ಇತ್ಯಾರ್ಥಪಡಿಸಲು ಆರ್‌ಟಿಐ ಅದಾಲತ್ ನಡೆಸಲು ತೆಗೆದುಕೊಂಡ ಕ್ರಮದ ಬಗ್ಗೆ ಸಭೆಗೆ ಸನ್ಮಾನ್ಯರೇ ವಿವರ ನೀಡಿದರು ಈ ಅದಾಲತ್‌ನ್ನು ನಡೆಸಲು ಕರ್ನಾಟಕ ರಾಜ್ಯ ಕಾನೂನು ಸಹಾಯ ಪ್ರಾಧಿಕಾರದ ಕಾರ್ಯದರ್ಶಿಯವರೊಂದಿಗೆ ಚರ್ಚಿಸಿ ಆ ಪ್ರಾಧಿಕಾರದಿಂದ ಇಬ್ಬರು ಕಾನೂನು ಅಧಿಕಾರಿಗಳನ್ನು ಸದರಿ ಅದಾಲತ್‌ಗೆ ನಿಯೋಜಿಸಲು ಪತ್ರ ವ್ಯವಹಾರ ಮಾಡಿರುವುದನ್ನು ಕೂಡ ಸಭೆಗೆ ತಿಳಿಸಲಾಯಿತು. ಅದಾಲತ್ ನಡೆಸಲು ವಿವಿಧ ಬಿಬಿಎಂಪಿ ಕಛೇರಿಗಳಿಗೆ ತೆರಳುವ. ಕರ್ನಾಟಕ ಮಾಹಿತಿ ಆಯೋಗದ ಸಿಬ್ಬಂದಿಗಳಿಗೆ ಕಾಫೀ ಹಾಗೂ ಲಘು ಉಪಹಾರದ ವ್ಯವಸ್ಥೆಯನ್ನು ಹಾಗೂ ಅವಶ್ಯಕ ಲೇಖನ ಸಾಮಾಗ್ರಿಗಳನ್ನು ಅಯೋಗದ ಕಛೇರಿ ಸಾದಿಲ್ವಾರು ವೆಚ್ಚದಿಂದ ಭರಿಸಲು ಸಭೆ ಸಮ್ಮತಿಸಿತು ಹಾಗೂ ಈ ಅದಾಲತ್ ನಡೆಸಲು ಅವಶ್ಯಕವಾದ ವ್ಯವಸ್ಥೆ ಮಾಡಲು ಕಾರ್ಯದರ್ಶಿ ಹಾಗೂ ಅಧೀನ ಕಾರ್ಯದರ್ಶಿಯವರಿಗೆ ಸಭೆ ಸೂಚಿಸಿತು.

ಕ್ರಮ: ಕಾರ್ಯದರ್ಶಿ

1.12.15

ರಾಜ್ಯ ಮುಖ್ಯ ಮಾಹಿತಿ ಆಯುಕ್ತರು (ಪ್ರ)
ಕರ್ನಾಟಕ ಮಾಹಿತಿ ಆಯೋಗ
ಬೆಂಗಳೂರು